ಬದುಕುವ ಕಲೆ



ಶರತ್ ಶೆಟ್ಟಿ ಪಡುಪಳ್ಳಿ

ಒಂದು ಊರಿನಲ್ಲಿ ಒಬ್ಬ ರಾಜನಿದ್ದನಂತೆ. ಅವನಿಗೆ ರಾಜಸಭೆಯಲ್ಲಿ ಏನಾದರೊಂದನ್ನು ಹೇಳಿ ತನ್ನನ್ನು ತಾನು ಹೊಗಳಿಸಿಕೊಳ್ಳುವ ಒಂದು ಹುಚ್ಚು. ಹಾಗೆ ಒಂದು ದಿನ ಒಂದು ದೊಡ್ಡ ಚೀನೀಕಾಯಿಯನ್ನು ತರಿಸಿ ಸಭೆಯಲ್ಲಿ ಹೇಳಿದನಂತೆ: "ನೋಡಿ, ಇದು ಚೀನೀಕಾಯಿ, ಬಹಳ ಸೊಗಸಾದ ತರಕಾರಿ. ಇದರಲ್ಲಿ ಮನುಷ್ಯನ ದೇಹಕ್ಕೆ ಬೇಕಾದ ಎಲ್ಲಾ ವಿಟಮಿನ್, ಕಬ್ಬಿಣಾಂಶ ಮತ್ತು ನಾರಿನಂಶಗಳಿವೆ. ಆದ್ದರಿಂದ ಈ ತರಕಾರಿಯ ಬೀಜವನ್ನು ನಮ್ಮ ಇಡೀ ರಾಜ್ಯದಾದ್ಯಂತ ಹಂಚಬೇಕು. ಪ್ರತಿಯೊಬ್ಬರೂ ತಮ್ಮ ಹಿತ್ತಲಿನಲ್ಲಿ ಇದನ್ನು ಬೆಳೆಯಬೇಕು."

ಆಗ ಸಭೆಯಲ್ಲಿದ್ದ ಎಲ್ಲಾ ಮಂತ್ರಿಗಳು, ವಿದ್ವಾಂಸರು ಮತ್ತು ಹೊಗಳುಭಟ್ಟರು, "ಹೌದು ಪ್ರಭು, ನೀವು ಹೇಳಿದ್ದು ನೂರಕ್ಕೆ ನೂರು ನಿಜ, ಇದು ಅತ್ಯಂತ ಸತ್ಯವಾದ ಮಾತು" ಎಂದು ಬೆಂಬಲಿಸಿದರಂತೆ.

ಕೆಲವು ದಿನಗಳು ಕಳೆದ ನಂತರ, ಅದೇ ರಾಜನು ಒಂದು ಬುಟ್ಟಿ ಮತ್ತು ಒಂದು ಚೀಲದ ತುಂಬಾ ಬದನೆಕಾಯಿಯ ಬೀಜಗಳನ್ನು ಸಭೆಗೆ ತರಿಸಿ ಹೇಳಿದನಂತೆ: "ಚೀನೀಕಾಯಿಯಷ್ಟು ಪ್ರಯೋಜನವಿಲ್ಲದ ತರಕಾರಿ ಮತ್ತೊಂದಿಲ್ಲ. ಆದ್ದರಿಂದ ಅದನ್ನು ನಮ್ಮ ರಾಜ್ಯದಲ್ಲಿ ಯಾರೂ ಬೆಳೆಯಬಾರದು. ಇಂದಿನಿಂದ ಎಲ್ಲರೂ ಈ ಬದನೆಕಾಯಿಯನ್ನೇ ಬೆಳೆಯಬೇಕು."

ಆಗಲೂ ಸಭೆಯಲ್ಲಿದ್ದ ಮಂತ್ರಿಗಳು ತಲೆದೂಗುತ್ತಾ, "ಹೌದು ಮಹಾಸ್ವಾಮಿ, ನಮ್ಮ ಮಹಾರಾಜರು ಹೇಳುತ್ತಿರುವುದು ಪರಮ ಸತ್ಯ" ಎಂದು ಜೋರಾಗಿ ಜಯಘೋಷ ಹಾಕುತ್ತಾ ಹೊಗಳಿದರಂತೆ.

ಇದನ್ನು ಕೇಳಿ ಮಹಾರಾಜನಿಗೆ ಕೋಪ ಬಂದಿತಂತೆ. ಅವನು ಮಂತ್ರಿಗಳನ್ನು ಕೇಳಿದನಂತೆ: "ಅಲ್ಲಾ, ನಾನು ಮೊನ್ನೆ ಚೀನೀಕಾಯಿ ಶ್ರೇಷ್ಠ ಅಂದಾಗಲೂ ಹೌದು ಹೌದು ಅಂದಿರಿ. ಇಂದು ಚೀನೀಕಾಯಿ ಕಸಕ್ಕೆ ಸಮಾನ, ಬದನೆಕಾಯಿಯೇ ಶ್ರೇಷ್ಠ ಎನ್ನುತ್ತಿದ್ದರೂ ಹೌದು ಹೌದು ಎನ್ನುತ್ತಿದ್ದೀರಿ. ನಿಮ್ಮ ಈ ವರ್ತನೆಯ ಅರ್ಥವೇನು?"

ಅದಕ್ಕೆ ಮಂತ್ರಿಗಳು ಎದ್ದು ನಿಂತು ವಿನಯದಿಂದ ಹೀಗೆಂದರಂತೆ: "ಸ್ವಾಮಿ, ನಮಗೆ ತಿಂಗಳು ತಿಂಗಳು ಸಂಬಳ ಕೊಡುವುದು ಕುಂಬಳಕಾಯಿಯೂ ಅಲ್ಲ ಅಥವಾ ಬದನೆಕಾಯಿಯೂ ಅಲ್ಲ. ಅದು ನೀವು!

ಹಾಗಾಗಿ ನೀವು ಏನನ್ನೇ ಹೇಳಿದರೂ ಅದನ್ನು ಸರಿ ಮತ್ತು ಸತ್ಯ ಎಂದು ಒಪ್ಪಿಕೊಳ್ಳುವುದೇ ಬದುಕುವ ಲಕ್ಷಣ. ನೀವು ಯಾವುದಕ್ಕೂ ಬೇಸರ ಮಾಡಿಕೊಳ್ಳಬೇಡಿ."

ಕಥೆಯ ನೀತಿ: "ಸಂಬಳ ಕೊಡುವ ಯಜಮಾನ ಏನೇ ಹೇಳಿದರೂ ಅದಕ್ಕೆ ತಲೆದೂಗುವುದೇ ಇಂದಿನ ಕಾಲದ ಬುದ್ಧಿವಂತಿಕೆ."

ಕೆಲವೊಮ್ಮೆ ನಮಗೆ ಎಷ್ಟೇ ತಿಳಿದಿದ್ದರೂ, ನಾವು ಹೇಳುವ ಸತ್ಯದಿಂದ ನಮಗೇ ತೊಂದರೆಯಾಗುತ್ತದೆ ಎಂದಾಗ ಅಥವಾ ನಮ್ಮ ಮೇಲಧಿಕಾರಿಗಳಿಗೆ ಆ ಸತ್ಯ ಅಪ್ರಿಯವೆನಿಸಿದಾಗ, ಮತ್ತು ಮುಖ್ಯವಾಗಿ ನಾವು ಹೇಳುವ ಸತ್ಯದಿಂದ ಯಾವುದೇ ದೊಡ್ಡ ಬದಲಾವಣೆ ಅಥವಾ ಹಾನಿ ಉಂಟಾಗುವುದಿಲ್ಲ ಎಂದಾದಲ್ಲಿ, ಮೇಲಿನವರು ಹೇಳಿದ್ದನ್ನೇ 'ಸರಿ' ಎಂದು ಒಪ್ಪಿಕೊಳ್ಳಬೇಕಾಗುತ್ತದೆ. ಇದು ಬದುಕುವ ಕಲೆ ಮತ್ತು ಬುದ್ಧಿವಂತಿಕೆಯ ಲಕ್ಷಣವೂ ಹೌದು.